## 3

ಭಾರತ್ ಬಜಾರಿನ ಅನಧಿಕೃತ ಗಾಸಿಪ್ ಭಾಷೆ ಹಿಂದಿ ಬರದಿದ್ದಕ್ಕೋ ಏನೋ ಯಾವಾಗಲೂ ಮುಗುಳ್ನಗುತ್ತಿದ್ದ ಕಾರ್ಲಿತೋ ದಿನಕಳೆದಂತೆ ಹತ್ತಿರವಾಗಿದ್ದ. ಸಂಜೆ ಐದರವರೆಗೆ ವಿಸ್ಪರಿಂಗ್ ಸ್ಟ್ರೀಮ್ಸ್‌ನಲ್ಲಿ ಜೆನಿಟರ್ ಕೆಲಸ ಮಾಡಿ, ನಂತರ ರಾತ್ರಿ ಹತ್ತರವರೆಗೆ ಭಾರತ್ ಬಜಾರಿನಲ್ಲಿ ಶಮಿಯಂತೆಯೇ ಗಂಟೆಕೂಲಿ ಮಾಡುತ್ತ, ಸದಾ ಏನನ್ನೋ ಗುನುಗುತ್ತ ಲಹರಿಯಲ್ಲಿ ಇರುವ ಕಾರ್ಲಿತೋಗೆ ಆಸಕ್ತಿಯಿರದ ವಿಷಯಗಳೇ ಇಲ್ಲ. ಮುರುಕು

